ಚಾಮರಾಜನಗರ ತಾಲ್ಲೂಕು ಚಂದಕವಾಡಿ 13 ಹೋಬಳಿಗಳಲ್ಲಿ ದರಖಾಸ್ತು ಜಮೀನುಗಳಲ್ಲಿ ಅಕ್ರಮ ಕಂದಕ ತೋಡಿರುವುದು.

2915(3671)

ಶ್ರೀ ಕೃಷ್ಣಮೂರ್ತಿ ಎ.ಆರ್.(ಸಂತೇಮಾರನಹಳ್ಳಿ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಚಂದಕವಾಡಿಯ 13 ಹೋಬಳಿಗಳಲ್ಲಿ ಬಡ ಫಲಾನುಭವಿಗಳಿಗೆ 1-11-95 ಮತ್ತು 26-12-97ರಲ್ಲಿ ಮಂಜೂರಾಗಿರುವ ದರಖಾಸ್ತು ಜಮೀನುಗಳಲ್ಲಿ ಅರಣ್ಯ ಇಲಾಖೆಯವರು ಅಕ್ರಮವಾಗಿ ಕಂದಕ ತೋಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಉಪ ವಿಭಾಗಾಧಿಕಾರಿಗಳು ದೂರು ದಾಖಲು ಮಾಡಿರುವ ಬಗ್ಗೆ ಅರಣ್ಯ ಇಲಾಖೆಯವರು ಕ್ರಮ ಕೈಗೊಂಡಿರುವರೆ?

ಇ) ಹಾಗಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು).

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):

ಅ) ಚಂದಕವಾಡಿ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯು ಯಾವುದೇ ದರಖಾಸ್ತು ಜಮೀನುಗಳಲ್ಲಿ ಅಕ್ರಮವಾಗಿ ಕಂದಕ ತೋಡಿದ್ದು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಂತೇಮರಳ್ಳಿ ಕ್ಷೇತ್ರದ ನಬಾರ್ಡ್ ಯೋಜನೆಯ ರಸ್ತೆಗಳು.

2916(3672)

ಶ್ರೀ ಕೃಷ್ಣಮೂರ್ತಿ ಎ.ಆರ್.(ಸಂತೇಮರಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸಂತೇಮರಳ್ಳಿ ಕ್ಷೇತ್ರಕ್ಕೆ ಸೇರಿದ ಯಾವ ಯಾವ ರಸ್ತೆಗಳು ಇದುವರೆಗೂ ನಬಾರ್ಡ್ ಯೋಜನೆಗೆ ಸೇರಲ್ಪಟ್ಟಿವೆ; ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ

ಮಂಜೂರಾಗಿದೆ.

2. ಹಾಗಿದ್ದಲ್ಲಿ ಕಾಮಗಾರಿ ಪೂರ್ಣಗೊಂಡಿರುವ ರಸ್ತಗಳಾವುವು, ಪೂರ್ಣಗೊಳ್ಳದ ರಸ್ತಗಳಾವುವು?

3. ಕಾಮಗಾರಿ ಪೂರ್ಣಗೊಳ್ಳದೇ ಇರುವುದಕ್ಕೆ ಕಾರಣವೇನು? (ವಿವರ ನೀಡುವುದು)

4. ಈ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಗೆ ಒಳಪಡದೇ ಉಳಿದಿರುವ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳು ಯಾವುವು? ಎಲ್ಲಾ ರಸ್ತೆಗಳು ಡಾಂಬರೀಕರಣಗೊಂಡಿದಯೇ?

5. ಹಾಗಿದ್ದಲ್ಲಿ, ಡಾಂಬರೀಕರಣಗೊಳ್ಳದೇ ಇರುವ ರಸ್ತೆಗಳು ಯಾವುವು? ಡಾಂಬರೀಕರಣಗೊಂಡಿದ್ದು ಸುಸ್ಥಿತಿಯಲ್ಲಿಲ್ಲದ ರಸ್ತೆಗಳು ಯಾವುವು?

6. ಇವುಗಳ ದುರಸ್ತಿಗಾಗಿ ಕೈಗೊಂಡಿರುವ ಕ್ರಮವೇನು? ಹಾಗೂ ದುರಸ್ತಿಗೆ ಬಿಡುಗಡೆ ಮಾಡಲಾಗಿರುವ ಹಣ ಎಷ್ಟು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ಲೋಕೋಪಯೋಗಿ ಇಲಾಖೆಯಡಿ ಈವರೆಗೆ ರೂ.484.41 ಲಕ್ಷ ಮೊತ್ತದ 9 ರಸ್ತೆ ಮತ್ತು 2 ಸೇತುವೆ ಕಾಮಗಾರಿಗಳು ನಬಾರ್ಡ್‌ನಿಂದ ಮಂಜೂರಾಗಿವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

2. ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

3. ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

4. ವಿವರಗಳನ್ನು ಅನುಬಂಧ-2ರಲ್ಲಿ ನೀಡಿದೆ. 5.20 ಕಿಮೀ ರಸ್ತೆ ಡಾಂಬರೀಕರಣವಾಗಿರುವುದಿಲ್ಲ.

5. ವಿವರಗಳನ್ನು ಅನುಬಂಧ-2ರಲ್ಲಿ ನೀಡಿದೆ.

6. ರಸ್ತೆಗಳ ಆಯ್ದ ಭಾಗಗಳಲ್ಲಿ ಡಾಂಬರೀಕರಣ ಮತ್ತು ಗುಂಡಿ ಮುಚ್ಚುವಿಕೆ ಅಡ್ಡಮೋರಿಗಳ ನಿರ್ಮಾಣ ಮುಂತಾದವುಗಳನ್ನು ಕೈಗೊಳ್ಳಲಾಗುತ್ತಿದೆ. ವಿವರಗಳನ್ನು ಅನುಬಂಧ-3ರಲ್ಲಿ ನೀಡಿದೆ.

ಅನುಬಂಧ-೧

ಪ್ರಶ್ನೆ ಸಂಖ್ಯೆ ೩೬೭೨ರ ಅನುಬಂಧ (ನಬಾರ್ಡ್ ಕಾಮಗಾರಿಗಳು)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಪ್ರಸ್ತುತ ಹಂತ	ಕಾಮಗಾರಿ ಪೂರ್ಣಗೊಳ್ಳದೆ ಇರುವುದಕ್ಕೆ ಕಾರಣ
1	Badanvalu Hemmaragala Somanahalli road (R 0090)	24.97	Completed	
2	Begur Kowlande road (R0448)	40.00	Completed	
3	Bridge at Ch 6.10 Km on Doddarayapet Alur Kagalwadi rd (b0037)	35.00	Completed	
4	Kagalvadi Gulipura road (R0240)	20.00	Completed	
5	Mysore Hunsur Ghat road joining CR Nagar (Part)	44.00	Completed	
6	Impts to road from Nanjangud Punajur road to Hemmaragala via Nerale in Nanjangud taluk	55.25	Progress	Work approved under RIDF-V

7	Impts to road from Thagadur to join KK road via Hadya Kariya in Nanjangud taluk.	58.95	Progress	Work approved under RIDF-V
8	Impts to Kuderu Thoravalli Mariyala road	59.40	Agency to be fixed	Work approved under RIDF-VI
9	Impts to Panyadahundi Ummathur road via Dasanoor	53.13	Agency to be fixed	Work approved under RIDF-VI
10	Impts to Santhemarahalli Hebsur road	56.65	Agency to be fixed	Work approved under RIDF-VI
11	Constn of bridge at 2.20Km of Banahalli Bagali Jannur road	37.06	A/A to be issued	Work approved under RIDF-VII recently
	Total	484.41		

ಅನುಬಂಧ-೨

ಸಂತೇಮರಳ್ಳಿ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆ ಹೊರತು ಪಡಿಸಿ ಇರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಹೆಸರು, ಡಾಂಬರೀಕರಣವಾಗದೆ ಇರುವ ಉದ್ದ ಮತ್ತು ಡಾಂಬರೀಕರಣವಾಗಿ ಸುಸ್ಥಿಯಲ್ಲಿದ್ದ ರಸ್ತೆಗಳ ವಿವರ.

ಕ್ರ. ಸಂ.	ರಸ್ತೆಯ ಹೆಸರು	ಕ್ಷೇತ್ರದಲ್ಲಿನ ಒಟ್ಟು ಉದ್ದ ಕಿ.ಮೀಗಳಲ್ಲಿ	ಡಾಂಬರು ಮೇಲ್ಮೈ ಉದ್ದ ಕಿಮೀ	ಇತರ ಮೇಲ್ಮೈ ಉದ್ದ ಕಿಮೀ	ಷರಾ
1	ದೊಡ್ಡರಾಯಪೇಟೆ ಆಲೂರು ಕಾಗಲವಾಡಿ ರಸ್ತೆ	5.20	4.00	1.20	----
2	ಸರಗೂರು ಹೊಂಗನೂರು ರಸ್ತೆ	8.00	7.50	0.50	ಬಹಳ ಹಿಂದೆ ಡಾಂಬರೀಕರಣವಾಗಿದ್ದು ದುರಸ್ತಿ ಅವಶ್ಯವಿದೆ.
3	ಯಳಂದೂರು ಹೊಂಗನೂರು ರಸ್ತೆ	4.60	4.60	--	ಬಹಳ ಹಿಂದೆ ಡಾಂಬರೀಕರಣವಾಗಿದ್ದು ದುರಸ್ತಿ ಅವಶ್ಯವಿದೆ.
4	ಚಾಮರಾಜನಗರ ಕೆ.ಗುಡಿ ಬಿ.ಆರ್. ಹಿಲ್ಸ್ ರಸ್ತೆ	28.00	26.00	--	----
5	ಕೌಲಂದೆ ಕೊಳ್ಳೇಗಾಲ ರಸ್ತೆ	22.50	22.50	--	----
6	ಕಡುಬಿನಕಟ್ಟೆಯಿಂದ ಕುರಹಟ್ಟಿ ಮಾರ್ಗ ಹೆಮ್ಮರಗಾಲ ಸೇರುವ ರಸ್ತೆ	3.80	0.30	3.50	----

7	ನಂಜನಗೂಡು ಪುಣಜೂರು ರಸ್ತೆ	7.00	7.00	--	ರಸ್ತೆಯ ನಿರ್ವಹಣೆಯನ್ನು ಮೂರು ವರ್ಷಗಳ ಅವಧಿಗೆ ರಾಜ್ಯ ಹೆದ್ದಾರಿ ನಿರ್ವಹಣೆ ಕಾರ್ಯಕ್ರಮದಲ್ಲಿ ಕೈಗೊಳ್ಳಲಾಗುತ್ತಿದೆ.

ಅನುಬಂಧ-೩

ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಲ್ಲಿ ೩೦೫೪-೫೫ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ದುರಸ್ತಿ ಮತ್ತು ಅಭಿವೃದ್ಧಿ ಕೈಗೊಳ್ಳಲಾದ ವಿವರ.

ಕ್ರ. ಸಂ.	ರಸ್ತೆಯ ಹೆಸರು	ಅಂದಾಜು ಮೊತ್ತ ಲಕ್ಷ ರೂಗಳಲ್ಲಿ	ಕಾಮಗಾರಿಯ ವಿವರ
1	ಟಿ.ನರಸೀಪುರ ಚಾಮರಾಜನಗರ ರಸ್ತೆ	10.00+0.42 +0.35+0.3	ಸರಪಳಿ 41ರಿಂದ 44.50ವರೆಗೆ ಆಯ್ದ ಭಾಗಗಳ ಡಾಂಬರೀಕರಣ ಸರಪಳಿ 41ರಿಂದ 43; 43.50ರಿಂದ 47ಕಿಮೀ ಮತ್ತು 47.20 ರಿಂದ 49.40 ಕಿಮೀನಲ್ಲಿ ತೀವ್ರ ಗುಂಡಿ ಮುಚ್ಚುವುದು.
2	ದೊಡ್ಡರಾಯಪೇಟೆ ಆಲೂರು ಕಾಗಲವಾಡಿ ರಸ್ತೆ	5.00+0.30+ 0.45+0.55+	ಸರಪಳಿ 6.4ರಿಂದ 9.15ವರೆಗೆ ಆಯ್ದ ಭಾಗಗಳ ಡಾಂಬರೀಕರಣ, ಸರಪಳಿ 7.5ರಿಂದ 10.4ವರೆಗೆ ತೀವ್ರ ಗುಂಡಿ ಮುಚ್ಚುವುದು. ಸರಪಳಿ 4.90 ಮತ್ತು 9.60 ಕಿಮೀನಲ್ಲಿ ಅಡ್ಡಮೋರಿಗಳ ನಿರ್ಮಾಣ.
3	ಚಾಮರಾಜನಗರ ಕೆ.ಗುಡಿ ಬಿ.ಆರ್. ಹಿಲ್ಸ್ ರಸ್ತೆ	4.00+0.40+ 0.30+0.30+ 0.63+1.00	ಸರಪಳಿ 6.4ರಿಂದ 8.00ವರೆಗೆ ಆಯ್ದ ಭಾಗಗಳ ಡಾಂಬರೀಕರಣ, ಸರಪಳಿ 6.9ರಿಂದ 8.0ವರೆಗೆ, 8.40ರಿಂದ 10.25ರವರೆಗೆ, 17.00 ರಿಂದ 18.50ರ ವರೆಗೆ, ತೀವ್ರ ಗುಂಡಿ ಮುಚ್ಚುವುದು, ಕಿಮೀ 6.35ರಲ್ಲಿ ಅಡ್ಡಮೋರಿ ನಿರ್ಮಾಣ ಮತ್ತು ಕಿಮೀ 8.40ರಲ್ಲಿ ಚಂದಕವಾಡಿ ಗ್ರಾಮ ಪರಿಮಿತಿಯಲ್ಲಿ ಸರ್ಕಲ್ ನಿರ್ಮಾಣ ಮತ್ತು ಡಾಂಬರೀಕರಣ.

4	ಸರಗೂರು ಹೊಂಗನೂರು ರಸ್ತೆ	4.00+0.4+ 0.45+0.42+0.65	ಸರಪಳಿ 0.0ರಿಂದ 8.00ವರೆಗೆ ಆಯ್ದ ಭಾಗಗಳ ಡಾಂಬರೀಕರಣ, ಸರಪಳಿ 0.0ರಿಂದ 3.0ವರೆಗೆ, 3.20ರಿಂದ 6.20ರವರೆಗೆ, 6.50 ರಿಂದ 8.00ವರೆಗೆ, ತೀವ್ರ ಗುಂಡಿ ಮುಚ್ಚುವುದು, ಕಿಮೀ 0.80ರಲ್ಲಿ ಅಡ್ಡಮೋರಿ ನಿರ್ಮಾಣ.
5	ಯಳಂದೂರು ಹೊಂಗನೂರು ರಸ್ತೆ	5.00+0.30+ 0.20	ಸರಪಳಿ 4.40ರಿಂದ 6.4ವರೆಗೆ ಆಯ್ದ ಭಾಗಗಳ ಡಾಂಬರೀಕರಣ, ಸರಪಳಿ 3.50ರಿಂದ 5.50ರವರೆಗೆ, 5.6ರಿಂದ 6.6ರವರೆಗೆ ತೀವ್ರ ಗುಂಡಿ ಮುಚ್ಚುವುದು.
6	ಕೌಲಂದೆ ಕೊಳ್ಳೇಗಾಲ ರಸ್ತೆ	2.0+0.40+ 0.45+0.42+ 0.40+0.70+0.66	ಸರಪಳಿ 0.4ರಿಂದ 0.80ವರೆಗೆ ಮತ್ತು 7.2ರಿಂದ 7.6 ಕಿಮೀ ವರೆಗೆ ಡಾಂಬರೀಕರಣ, ಸರಪಳಿ 7.20 ರಿಂದ 9.50ವರೆಗೆ, 10.0ರಿಂದ 14.0ವರೆಗೆ, 14.50 ರಿಂದ 17.50 ವರೆಗೆ, 18.00ರಿಂದ 22.50ವರೆಗೆ ತೀವ್ರ ಗುಂಡಿ ಮುಚ್ಚುವುದು, ಕಿಮೀ 13.80ರಲ್ಲಿ ಅಡ್ಡಮೋರಿ ನಿರ್ಮಾಣ ಮತ್ತು ವಾರ್ಷಿಕ ದುರಸ್ತಿ
7	ಕೌಲಂದೆ ಸಂತೇಮರಳ್ಳಿ ರಸ್ತೆ	5.0	ಸರಪಳಿ 11.0ರಿಂದ 12.3ವರೆಗೆ ಮತ್ತು 13.60ರಿಂದ 13.75 ಕಿಮೀ ವರೆಗೆ ಆಯ್ದ ಭಾಗಗಳಲ್ಲಿ ಅಭಿವೃದ್ಧಿ
8	ಬದನವಾಳು ಹೆಮ್ಮರಗಾಲ ಸೋಮನಹಳ್ಳಿ ರಸ್ತೆ	2.0+5.50+0.69	ಕಿಮೀ 3.05ರಿಂದ 3.70ವರೆಗೆ ಡಾಂಬರೀಕರಣ, ಕಿಮೀ 3.40ರಲ್ಲಿ ಸೇತುವೆ ನಿರ್ಮಾಣ ಮತ್ತು ವಾರ್ಷಿಕ ದುರಸ್ತಿ.

9	ಕಡುಬಿನಕಟ್ಟೆಯಿಂದ ಕುರಹಟ್ಟ ಮಾರ್ಗ ಹಮ್ಮರಗಾಲ ಸೇರುವ ರಸ್ತೆ	7.00+2.0+0.35	ಸರಪಳಿ 6.80ರಿಂದ 8.00ವರೆಗೆ ಆಯ್ದ ಭಾಗಗಳಲ್ಲಿ ಸ್ಥಿರೀಕರಣ ಮತ್ತು ಜಲ್ಲಿಘಟ್ಟಣೆ, 2 ಅಡ್ಡಮೋರಿಗಳ ನಿರ್ಮಾಣ ಮತ್ತು ವಾರ್ಷಿಕ ದುರಸ್ತಿ

5054 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳು

1	ಚಾಮರಾಜನಗರ ಕೆ.ಗುಡಿ ಬಿ.ಆರ್. ಹಿಲ್ಸ್ ರಸ್ತೆ	35.00	ಸರಪಳಿ 10.00 ರಿಂದ 17.00 ಮತ್ತು 38.00ರಿಂದ 42.00 ಕಿಮೀನಲ್ಲಿ ಅಭಿವೃದ್ಧಿಪಡಿಸುವುದು.